# ಮರ ಕೊಟ್ಟ ವರ

■ ಭೋಜರಾಜ ಸೊಪ್ಪಿಮಠ

ವ್ಯಾಪಾರಿಯೊಬ್ಬ ವಿವಿಧ ವ್ಯಾಪಾರ ಮಾಡುತ್ತಿದ್ದ. ಅವನ ಚೌಕಾಸಿ ಇರಲಿಲ್ಲ. ಅಗ್ಗದ ಬೆಲೆಗೆ ಕೊಂಡು ಅವುಗಳನ್ನು ದುಬಾರಿ ಬೆಲೆಗೆ ಮಾರುತಿದ್ದ. ಮಾರುವಾಗ ಎಂದೂ ರಿಯಾಯ್ತಿ ಕೊಡುತ್ತಿರಲಿಲ್ಲ. ಒಮ್ಮೆ ನಾಡಿನಲ್ಲಿ ಅತಿವೃಷ್ಟಿಯಾಯಿತು. ಇದರಿಂದ ಸಾಂಕ್ರಾಮಿಕ ರೋಗಗಳು ಹೆಚ್ಚಬಹುದೆಂದು ಲೆಕ್ಕ ಹಾಕಿದ. ಈಗಲೇ ಔಷಧ ತೆಗೆದಿರಿಸಿಕೊಂಡರೆ ರೋಗ ಉಲ್ಬಣದ ಸಮಯದಲ್ಲಿ ಅವು ಅತೀ ಹೆಚ್ಚಿನ ಬೆಲೆಗೆ ಮಾರಾಟವಾಗಿ ತನಗೆ ಒಳ್ಳೆಯ ಲಾಭ ಸಿಗಬಹುದೆಂದುಕೊಂಡ. ಆದರೆ ಅವನ ಎಣಿಕೆ ಹುಸಿಯಾಯಿತು. ನಾಡಿನೆಲ್ಲೆಡೆ ಎಲ್ಲರೂ ಆರೋಗ್ಯದಿಂದಿದ್ದರು. ಯಾರೂ ರೋಗದಿಂದ ಬಳಲಲಿಲ್ಲ. ತನ್ನ ಔಷಧಗಳಿಗೆ ಬೇಡಿಕೆ ಬರಲಿಲ್ಲ ಎಂಬ ಚಿಂತೆಯಲ್ಲಿಯೇ ಇದ್ದ. ಕೂತರೂ, ನಿಂತರೂ ಅದೇ ಯೋಚನೆಯಾಯಿತು.

ಒಂದು ಬಾರಿ ಪಕ್ಕದ ಊರಿಗೆ ವ್ಯಾಪಾರಕ್ಕೆಂದು ಹೋಗಿದ್ದ. ಮರಳಿ ಬರುವಾಗ ಕತ್ತಲಾಯಿತು. ಮುಂದೆ ಹೋಗುವಾಗ ಬೆಳಕು ಕಾಣದಾಗಿ ಒಂದು ಮಾವಿನ ಮರವನ್ನೇರಿ ಕುಳಿತ. ಎಲ್ಲಿಂದಲೋ ಒಂದು ಎಮ್ಮೆ ಕೂಡಾ ಆ ಮಾವಿನ ಮರದ ಬಳಿ ಬಂದು ನಿಂತಿತು. ಅದು ಮಾವಿನ ಮರದ ಚಿಗುರೆಲೆಗಳನ್ನು ಹಿಡಿದೆಳೆದರೆ ತಾನು ಬಿದ್ದು ಬಿಡಬಹುದೆಂದೆಣಿಸಿ ಅದು ತಿನ್ನದಂತೆ ಕುಳಿತಲ್ಲಿಂದಲೇ ಎಮ್ಮೆಯನ್ನು ಒದೆಯತೊಡಗಿದ. ಈ ರೀತಿಯ ಹೋರಾಟ ಬೆಳಗಿನವರೆಗೂ ನಡೆಯಿತು.

ಬೆಳಕು ಹರಿಯುತಿದ್ದಂತೆ ವ್ಯಾಪಾರಿ ಗಿಡದಿಂದ ಕೆಳಗಿಳಿದ. ಆಗ ಮರವು ಸಂತೋಷಗೊಂಡು ಎಂಥಾ ಪುಣ್ಯ ಪುರುಷನಪ್ಪ ನೀನು. ಆ ಎಮ್ಮೆಯು ನನ್ನ ಚಿಗುರೆಲೆಯನ್ನು ತಿಂದು ಹಾಕುತಿತ್ತು. ನೀನು ರಾತ್ರಿಯಿಡಿ ಅದರಿಂದ ನನ್ನನ್ನು ರಕ್ಷಿಸಿದೆ. ನಿನ್ನನ್ನು ಎಷ್ಟು ಕೊಂಡಾಡಿದರೂ ಸಾಲದು ಎಂದಿತು. ವ್ಯಾಪಾರಿಗೆ ತೀರಾ ಆಶ್ಚರ್ಯವಾಯಿತು. ಮರಕ್ಕೆ ಮಾತನಾಡಲು ಬರುತ್ತದೆಯೇ? ಹಾಗಿದ್ದರೆ ಇದರಿಂದ ಏನಾದರೂ ಲಾಭ ಪಡೆದುಕೊಳ್ಳಬೇಕೆಂದುಕೊಂಡ. ಮರವು ಸುಮ್ಮನಿದ್ದಿದ್ದರೆ ವ್ಯಾಪಾರಿ ತನ್ನ ಪಾಡಿಗೆ ತಾನು ಹೊರಟು ಹೋಗಿ ಬಿಡುತಿದ್ದ. ಆದರೆ ಅದು ಬಾಯಿ ಬಿಟ್ಟು ತಪ್ಪು ಮಾಡಿತು. ಕೂಡಲೇ ಆ ವ್ಯಾಪಾರಿ ಗಿಡದ ಚಿಗುರೆಲೆಗಳನ್ನು ಗಟ್ಟಿಯಾಗಿ ಹಿಡಿದುಕೊಂಡ.

ನನಗೆ ಬರೀ ಬಾಯಿ ಮಾತಿನ ಧನ್ಯವಾದ ಬೇಕಾಗಿಲ್ಲ. ಅದರಿಂದ ನನಗೆ ಉಪಯೋಗವೂ ಇಲ್ಲ. ನಿನ್ನ ಎಲೆಗಳನ್ನು ಉಳಿಸಿದುದಕ್ಕೆ ಪ್ರತಿಫಲವಾಗಿ ಏನಾದರೂ ಕೊಡು. ಇಲ್ಲದಿದ್ದರೆ ನಾನೇ ಇವುಗಳನ್ನು ಮುರಿದು ಹಾಕುತ್ತೇನೆ ಎಂದು ಬೆದರಿಕೆ ಹಾಕಿದ. ನಾನೋ ಒಂದೇ ಸ್ಥಳದಲ್ಲಿ ನಿಂತಿರುವ ಮರ. ನಿನಗೆ ಕೊಡಲು ನನ್ನಲ್ಲಿ ಏನಿದೆ? ಸುಮ್ಮನೇ ನನ್ನನ್ನು ಒತ್ತಾಯಿಸಬೇಡ ಎಂದು ಮರ ಕೇಳಿಕೊಂಡಿತು.

ವ್ಯಾಪಾರಿ ಬಲವಂತ ಮಾಡಿದ. ನಾನು ಬರಿಗೈಯಿಂದ ಇಲ್ಲಿಂದ ಹೋಗುವುದಿಲ್ಲ. ನನಗೆ ಏನಾದರೂ ಬೇಕು. ನಿನಗೆ ಏನಾದರೂ ಕೊಡಲು ಆಗದಿದ್ದರೆ ಒಂದು ವರವನ್ನಾದರೂ ಕೊಡು. ನನ್ನಲ್ಲಿ ಔಷಧಗಳು ಜಾಸ್ತಿ ಇವೆ. ಕೊನೆಗೆ ಅವುಗಳ ಬೆಲೆಯಾದರೂ ಜಾಸ್ತಿಯಾಗುವಂತೆ ಮಾಡು ಎಂದನು. ಸರಿ ನಿನ್ನಿಷ್ಟದಂತೆಯೇ ಆಗಲಿ. ಬೆಲೆಗಳು ಮೇಲೇರಲಿ ಬೆಲೆಗಳು ಮೇಲೇರಲಿ ಎಂದು ಜಪ ಮಾಡುತ್ತಾ ಹೋಗು. ಒಂದು ಸಾವಿರ ಬಾರಿ ಹಾಗೆ ಜಪಿಸಿದ ತಕ್ಷಣ ನೀನು ಏನನ್ನು ಇಚ್ಛಿಸುತ್ತಿಯೋ ಅದರ ಬೆಲೆಗಳು ಏರತೊಡಗುತ್ತವೆ ಎಂದು ಹೇಳಿತು. ಇದರಿಂದ ಸಂತೋಷಗೊಂಡ ವ್ಯಾಪಾರಿ ತಾನು ಭಾರೀ ಶ್ರೀಮಂತನಾಗಬಹುದೆಂದು ಮನಸ್ಸಿನಲ್ಲಯೇ ಮಂಡಿಗೆ ತಿನ್ನುತ್ತಾ ಮಾವಿನ ಮರಕ್ಕೆ ಧನ್ಯವಾದ ತಿಳಿಸಿ ಹೊರಟು ನಿಂತ. ದಾರಿಯಲ್ಲಿ ಬೆಲೆಗಳು ಮೇಲೇರಲಿ ಬೆಲೆಗಳು ಮೇಲೇರಲಿ ಎಂದು ಜಪಿಸುತ್ತಾ ಹೊರಟ. ದಾರಿಯಲ್ಲಿ ಅಕಸ್ಮಾತ್ತಾಗಿ ಹುಲಿಯೊಂದು ಅಡ್ಡ ಬಂದಿತು. ವ್ಯಾಪಾರಿ ಭಯದಿಂದ ಕಂಗಾಲಾಗಿ ನಿಂತುಕೊಂಡ. ತಡ ಮಾಡುವಂತಿರಲಿಲ್ಲ. ಹೇಗಾದರೂ ತಪ್ಪಿಸಿಕೊಳ್ಳಬೇಕು. ಪಕ್ಕದಲ್ಲಿಯೇ ಬಿದುರಿನ ಗಿಡ ಇದ್ದಿತು. ಅದನ್ನು ಸರಸರನೇ ಏರಿದ ಅಷ್ಟೊತ್ತಿಗಾಗಲೇ ಬೆಲೆಗಳು ಮೇಲೇರಲಿ ಬೆಲೆಗಳು ಮೇಲೇರಲಿ ಎಂದು ಸಾವಿರ ಬಾರಿ ಹೇಳಿಯಾಗಿತ್ತು. ಭಯದಲ್ಲಿ ಬರೀ ಮೇಲೇರಲಿ ಮೇಲೇರಲಿ ಎನ್ನತೊಡಗಿದ. ಅವನ ಮಾತು ಸಿದ್ಧಿಸಿತು. ಬಿದಿರಿನ ಮರ ಮೇಲೇರುತ್ತಾ ಹೋಯಿತು. ಬೆಳೆಯುತ್ತಾ ಹೋದಂತೆ ಅವನು ಮೋಡದಲ್ಲಿ ಮರೆಯಾದ. ಕೆಳಗಿಳಿದು ಬರಲು ಸಾಧ್ಯವಾಗಲಿಲ್ಲ. ಧನಿಕನಾಗಬೇಕೆಂದು ಅತೀ ಆಸೆಯಿಂದಾಗಿ ತನ್ನ ಸಾವಿಗೆ ತಾನೇ ಕಾರಣನಾದ

(ಸಂಗ್ರಹ)





ಮಂಜುನಾಥ ಹುಲುಕೊಪ್ಪದ